# ಕರ್ನಾಟಕ ರಾಜ್ಯ ಶುಶ್ರೂಷಾ ಪರೀಕ್ಷಾ ಮಂಡಳಿ

# KARNATAKA STATE DIPLOMA IN NURSING EXAMINATION BOARD

1st Floor, Library Block, Bangalore Medical College & Research Institute Campus, K.R.Road, Bengaluru-02, Ph: 080-26700074, 26700075 Fax: 080-26700034 Email:ksdneb@gmail.com
Web: www.ksdneb.org, www.ksdneb.net

ಕ.ರಾ.ಶು.ಪ.ಮಂ / ಸಿಬ್ಬಂದಿ / 01 / 2018–2019 ದಿನಾಂಕ: 13–06–2018

## ಸುತ್ತೋಲೆ

ವಿಷಯ: ಆಗಸ್ಟ್ 2018ರ ವಾರ್ಷಿಕ ಪರೀಕ್ಷೆಯ ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಲು ನಿಗಧಿಪಡಿಸಿರುವ ದಿನಾಂಕವನ್ನು ವಿಸ್ತರಿಸುವ ಬಗ್ಗೆ.

*****

ಆಗಸ್ಟ್ 2018ರ ವಾರ್ಷಿಕ ಪರೀಕ್ಷೆಯ ವೇಳಾಪಟ್ಟಿಯನ್ನು ಪರೀಕ್ಷಾ ಮಂಡಳಿಯ ಇದೇ ಪತ್ರ ಸಮ ಸಂಖ್ಯೆಯ ದಿನಾಂಕ 10–05–2018 ರಲ್ಲಿ ಈಗಾಗಲೇ ಪ್ರಕಟಿಸಲಾಗಿರುತ್ತದೆ. ಮತ್ತು ಪ್ರಕಟಿಸಿರುವ ವೇಳಾಪಟ್ಟಿಯ ಸುತ್ತೋಲೆಯಲ್ಲಿ ಆಗಸ್ಟ್ 2018ರ ವಾರ್ಷಿಕ ಪರೀಕ್ಷೆಯ ಪರೀಕ್ಷಾ ಅರ್ಜಿಗಳನ್ನು ಪರೀಕ್ಷಾ ಮಂಡಳಿಗೆ ಸಲ್ಲಿಸಲು ದಿನಾಂಕ 11–06–2018 ಕೊನೆಯ ದಿನಾಂಕವೆಂದು ನಿಗಧಿಪಡಿಸಲಾಗಿತ್ತು ಹಾಗೂ ದಿನಾಂಕ 26–06–2018ರವರೆಗೆ ದಂಡ ಸಹಿತ ಅರ್ಜಿಗಳನ್ನು ಪಡೆಯಲು ಕೊನೆಯ ದಿನಾಂಕವೆಂದು ಸೂಚಿಸಲಾಗಿತ್ತು.

ಮುಂದುವರೆದು ಮೊದಲನೇ ವರ್ಷದ ಪರೀಕ್ಷಾ ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಭರ್ತಿ ಮಾಡುವ ಮೊದಲು ವೆಬ್ ಕ್ಯಾಮಾರಾದಿಂದ ವಿದ್ಯಾರ್ಥಿಗಳ ಭಾವಚಿತ್ರ ತೆಗೆದು ಹಾಗೂ ಬಯೋಮೆಟ್ರಿಕ್ ನಿಂದ ತಂಬಿಂಗ್ ಮಾಡಿ ಅಪ್‌ಲೋಡ್ ಮಾಡಲು ಸೂಚಿಸಲಾಗಿತ್ತು. ಆದರೆ ಬಯೋಮೆಟ್ರಿಕ್ ಮಿಷನ್ ತಾಂತ್ರಿಕ ಕಾರಣದಿಂದ ಲಭ್ಯವಿಲ್ಲದೇ ಇರುವುದರಿಂದ ತಡೆಹಿಡಿದು ಇದರ ಬಗ್ಗೆ ನಿಗಧಿತ ದಿನಾಂಕದೊಳಗೆ ಮಾಹಿತಿ ನೀಡಲಾಗುವುದು.

ಆದ್ದರಿಂದ ಕಾರ್ಯನಿರ್ವಹಣಾ ನಿರ್ದೇಶಕರ ಆದೇಶದ ಮೇರೆಗೆ ಪರೀಕ್ಷಾ ಅರ್ಜಿಗಳನ್ನು ಅಪ್‌ಲೋಡ್ ಮಾಡುವಾಗ ವೆಬ್ ಕ್ಯಾಮಾರಾದಿಂದ ವಿದ್ಯಾರ್ಥಿಗಳ ಭಾವಚಿತ್ರ ತೆಗೆದು ಅಪ್‌ಲೋಡ್ ಮಾಡಬೇಕು. ನಂತರ ಎರಡನೇ ಹಾಗೂ ಮೂರನೇ ವರ್ಷದ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಗಳನ್ನು ಸಲ್ಲಿಸುವ ಮೊದಲು ಆಂತರಿಕ ಅಂಕಗಳನ್ನು ಅಪ್‌ಲೋಡ್ ಮಾಡಿ ನಂತರ ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಬೇಕು. **ಆಗಸ್ಟ್ 2018ರ ವಾರ್ಷಿಕ ಪರೀಕ್ಷೆಯ ಪರೀಕ್ಷಾ ಅರ್ಜಿಗಳನ್ನು ಸಲ್ಲಿಸುವ ಕೊನೆಯ ದಿನಾಂಕವನ್ನು 30–06–2018 ರವರೆಗೆ ವಿಸ್ತರಿಸಲಾಗಿದೆ. ಹಾಗೂ ಕೊನೆಯ ದಿನಾಂಕವು ಮುಗಿದ ಮೇಲೆ ಪ್ರತಿ ವಿದ್ಯಾರ್ಥಿಗೆ ರೂ.15/– ರಂತೆ ಪ್ರತಿ ದಿನಕ್ಕೆ ದಂಡಶುಲ್ಕವಾಗಿ ದಿನಾಂಕ 06–07–2018ರವರೆಗೆ ಮತ್ತು 07–07–2018 ರಿಂದ ರೂ.10,000/–ರಂತೆ ದಿನಾಂಕ 10–07–2018ರವರೆಗೆ ವಿಸ್ತರಿಸಲಾಗಿದೆ.**

Hanac

ಕಾರ್ಯದರ್ಶಿಗಳು,
ಕ.ರಾ.ಶು.ಪ.ಮಂ, ಬೆಂಗಳೂರು.

13/06/18

1. ಪ್ರತಿಯನ್ನು ಸಂಬಂಧಪಟ್ಟ ಪರೀಕ್ಷಾ ವಿಭಾಗಗಳ ಸಿಬ್ಬಂದಿಗಳ ಮಾಹಿತಿಗಾಗಿ
2. ಪ್ರತಿಯನ್ನು ಶ್ರೀ ಯಶವಂತ್ ಬಿ.ಎನ್. ಕಂಪ್ಯೂಟರ್ ಆಪರೇಟರ್‌ರವರ ಮಾಹಿತಿಗಾಗಿ ಹಾಗೂ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಹಾಗೂ ಇ–ಮೇಲ್ ಮುಖಾಂತರ ಎಲ್ಲಾ ಶುಶ್ರೂಷಾ ಶಾಲೆಗಳಿಗೆ ಕಳುಹಿಸಲು ಸೂಚಿಸಲಾಗಿದೆ.